Literacy for a Billion

Movie: Thayi Kotta Thali
Year: 1987

Song: Raviyagi Udisi Nee Bande
Lyricist: Vijaya Narasimha

ಆ ಹಾ ಹಾ

ಲಾಲಲಾ ಲಾ

ಹೇ ಹೇ..

ಲಾರ ಲರ ಲಾ

ಲಾ ಲಾ ಲಾ

ಲಾ ಲಾ ಲಾ

ರವಿಯಾಗಿ ಉದಿಸಿ ನೀ ಬಂದೆ

ಬೆಳಕಾಗಿ ಬಾಳಿನಲಿ ನಿಂದೆ

ಉಸಿರಾಗಿ ಜೊತೆಗೆ ನೀ ಬಾರೆ

ಹಸಿರೊಂದೆ ಕಾಡಿನಲಿ ಕೋರೆ

ರವಿಯಾಗಿ ಉದಿಸಿ ನೀ ಬಂದೆ

ಉಸಿರಾಗಿ ಜೊತೆಗೆ ನೀ ಬಾರೆ

ಕುಂಕುಮವು ಹಣೆಗೆ ನೀನು

ಮಾಂಗಲ್ಯ ಕೊರಳಿಗೆ ನೀನು

ಕಿವಿಗಳ ಓಲೆಯು ನೀನು

ಕೈಗಳ ಬಳೆಯು ನೀನು

ಮೂಗಿನ ಮೂಗುತಿ ನೀನು

ಬೆಳಕಿನ ಕಾಂತಿಯು ನೀನು

ನೀರಿನ ಶಾಂತಿಯು ನೀನು

ಗಾಳಿಯ ತಂಪು ನೀನು

ಬಾನಿನ ಸೊಂಪು ನೀನು

ಭೂತಾಯ ತಾಳ್ಮೆಯು ನೀನು

ನನ ಎದೆಯ ಬಡಿತವೆ ನೀನು

ಬಾಳ ಬನದ ಚಂದ್ರಮ ನೀನು

ನನ ಆಸೆಯ ತುಡಿತವೆ ನೀನು

ಬಾಳ ಬಾನಿನ ಚಂದಿರ ನೀನು

ಬೆಳದಿಂಗಳ ಹೊಳೆಯಲ್ಲಿಯೇ

ಈಜುತ ತೇಲುತ ಸಾಗೋಣ

ರವಿಯಾಗಿ ಉದಿಸಿ ನೀ ಬಂದೆ

ಉಸಿರಾಗಿ ಜೊತೆಗೆ ನೀ ಬಾರೆ

ಲಾ ಲಾ ಲಾ ಲಾ ಸರಿ ಸರಿ

ರೀ ರೀ ರೀ ರೀ ರಿಸ ರಿಸ

ಆ.. ಆ.. ಆ.. ಆ.. ಆ...

ಮುಂಗುರುಳ ಕಪ್ಪು ನೀನು

ತುಟಿಗಳ ಕೆಂಪು ನೀನು

ಕೆನೆಯ ಹೊಳಪೇ ನೀನು

ದಂತದ ಬಿಳುಪೇ ನೀನು

ಕಣ್ಣಿನ ಕಾಂತಿಯು ನೀನು

ಹಾಲಂಥ ಹುಡುಗಿ ನೀನು

ನೀ ನನ ಬಾಳ ಜೇನು

ನೀನಿಲ್ಲದಿರುವ ನಾನು

ನೀರಿಲ್ಲದಿರುವ ಮೀನು

ಬಾಳಿನ ಚೇತನ ನೀನು

ನನ ಮನಸಿನ ಗಂಡನೇ ನೀನು
ರಾಗ ತಾಳದ ಭಾವವೇ ನೀನು
ನನ ಮನಸಿನ ಗಂಡೇ ನೀನು
ನಾಟ್ಯಲಯದ ಲಹರಿಯೇ ನೀನು

ಅನುರಾಗದ ಅನುಪಲ್ಲವಿ
ಹಾಡುತ ಹಾರುತ ತೇಲೋಣ
ರವಿಯಾಗಿ ಉದಿಸಿ ನೀ ಬಂದೆ
ಉಸಿರಾಗಿ ಜೊತೆಗೆ ನೀ ಬಾರೆ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*